REGD.NEWS PAPER RNI 50347/1989
RNI.Reg.No.KA/BGGPO/2516/2021-23
NO.MAG(3) /NPP/273 2022-2023
Licenced to post without Pre-payment
Registered Regn.No. PMG/BG/WPP-CO -1 /2021-2023
Posted at BANGALORE PSO, MYSORE ROAD,
BANGALORE – 560026

Date of publication 18th of every month
Permitted to post on 20th or 21st

ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)



# ವಾರ್ತಾಪತ್ರ

## ಕನ್ನಡ ಮಾಸ ಪತ್ರಿಕೆ

ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009
ದೂರವಾಣಿ : 080–22206151 – 22206152 – 22206153
Website: www.kavms.com E-mail: kavmss@gmail.com

ಸಂಪಾದಕರು:
ರಾ.ಪ. ರವಿಶಂಕರ್

ಕಾರ್ಯಾಲಯ ಸಮಯ { ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : 36 ನವೆಂಬರ್ 2023 ಬೆಲೆ : 1 ರೂ. ಪುಟಗಳು : 4 ಸಂಚಿಕೆ : 11

# ಅಧ್ಯಕ್ಷರ ನುಡಿ



**ನಮ್ಮಿಂದ ಬರುವ ಪ್ರತಿ ಅಲೋಚನೆಯು ಒಬ್ಬರಿಗೆ ಬೆಳಕು ಕೊಡುವ ಹಾಗೆ ಇರಬೇಕೇ ಹೊರತು, ಕತ್ತಲಿನ ಕೂಪಕ್ಕೆ ತಳ್ಳುವ ಹಾಗೆ ಇರಬಾರದು** ಎಂಬ ಉದ್ದೇಶಗಳಿಂದ ಸೇವಾ ಸಂಸ್ಥೆಗಳು ನಿಸ್ವಾರ್ಥದಿಂದ ಕಾರ್ಯನಿರ್ವಹಿಸಿದಾಗ ಮಾತ್ರವೇ ಸೇವೆಗೊಂದು ಅರ್ಥ ಬರುತ್ತದೆ, ನಾವು ಮಾಡಿದ ಸೇವೆ ಜನಮನವನ್ನು ತಲುಪುತ್ತದೆ, ಅವಶ್ಯಕತೆಯಿದ್ದವರಿಗೆ ಸೇವೆ ತಲುಪಿ ಸೇವೆಯ ಶ್ರಮ ಸಾರ್ಥಕತೆ ಮೆರೆಯುತ್ತದೆ. ಸೇವೆ ಎನ್ನುವುದು ಸ್ಪಟಿಕದಂತೆ ಶುಭ್ರವಾಗಿರಬೇಕು, ಅಲ್ಲಿ ಸ್ವಾರ್ಥ ಚಿಂತನೆಗೆ ಅವಕಾಶವೇ ಇರಬಾರದು ಅಲ್ಲವೇ? ಸ್ವಜನ ಪಕ್ಷಪಾತವೂ ಇರಬಾರದು. ಸೇವೆ ಹೇಗಿರಬೇಕು ಎಂದರೇ, **ಸೋತ ಮನಸಿಗೆ ಸ್ಪೂರ್ತಿಯಾಗಿರಬೇಕು, ಬೆಂದ ಹೃದಯಕ್ಕೆ ಬಂಧುವಾಗಿರಬೇಕು, ಕಂಬನಿ ಒರೆಸುವ ಕೈ ನಾವಾಗಿರಬೇಕು.** ನಾವು ಮಾಡಿದ ಸೇವೆ ನಮ್ಮ ಹೃದಯಕ್ಕೆ, ಮನಸ್ಸಿಗೆ ನೆಮ್ಮದಿ ನೀಡಬೇಕು, ಅಂತಹ ಸೇವಾ ಕಾರ್ಯಕ್ರಮಗಳಿಂದ ಜೀವನ ಪರ್ಯಂತ ನಮಗೆ ಆನಂದ ದೊರೆಯುತ್ತದೆ, ಮತ್ತೊಬ್ಬರಿಗೆ ಸ್ಪೂರ್ತಿಯೂ, ಆನಂದವೂ, ಆದರ್ಶವೂ ಆಗಿರುತ್ತದೆ.

**ಬೇಡ ಎಂದವರಿಗೆ ಭಾರ ಆಗುವ ಬದಲು, ಬೇಕು ಎನ್ನುವವರಿಗೆ ಬೆಳಕಾಗುವಂತಹ ಉತ್ತಮ ಕೆಲಸಗಳು ನಮ್ಮ ಮನಸ್ಸುಗಳನ್ನು ಸದಾ ಕಾಲ ಸಕಾರಾತ್ಮಕವಾಗಿ ಇಟ್ಟಿರುತ್ತದೆ.** ತನ್ಮೂಲಕ ನಮ್ಮ ಆಲೋಚನೆಗಳು ಮತ್ತು ನಮ್ಮ ಪರಿವಾರವೂ ಸಕಾರಾತ್ಮಕವಾಗಿದ್ದು ಕೈಗೆತ್ತಿಕೊಳ್ಳುವ ಪ್ರತೀ ಕೆಲಸಗಳು ಸಹ ಪರಿಣಾಮಕಾರಿಯಾಗಿ ಅನುಷ್ಠಾನಗೊಂಡು ಉದ್ದೇಶಿತ ಗುರಿಯನ್ನು ತಲುಪುವಲ್ಲಿ ಯಶಸ್ವಿ ಆಗುತ್ತದೆ. **ಸೇವೆ ಎಂಬುದೇನೂ ಪುಕ್ಕಟೆಯಾಗಿ ಆಗುವುದಿಲ್ಲ,** ಅವರವರ ಶಕ್ತಿಗನುಸಾರ ತನು–ಮನ–ಧನಗಳ ಸಮರ್ಪಣೆ ಆಗಲೇಬೇಕು, ಮಾಡಿದ ಕೆಲಸವೆಲ್ಲಾ ಯಶಸ್ಸು ಕೊಡುವುದಿಲ್ಲ, ಒಮ್ಮೆ ಯಶಸ್ಸು ದೊರೆಯಿತು ಎಂದ ಮೇಲೆ ಯಶಸ್ಸಿಗೆ ಸಾವಿರ ಜನ ಪಾಲುದಾರರು. ಒಂದು ವೇಳೆ ನಾವು ಕೈಗೆತ್ತಿಕೊಂಡ ಸೇವಾ ಕಾರ್ಯಕ್ರಮ ಕೈ ಕೊಟ್ಟಿತು ಎಂದರೇ ಸಾವಿರ ಜನಗಳಿಂದ ನಿಷ್ಠೂರದ ಮಾತುಗಳನ್ನು ಏಕಾಂಗಿಯಾಗಿ ಕೇಳಬೇಕು. ಮತ್ತೊಂದೆಡೆ ಸಾಹಸಮಯವಾದ ಸೇವಾ ಕಾರ್ಯಗಳನ್ನು ಕೈಗೆತ್ತಿಕೊಂಡಾಗ, ನೂರಾರು ಸಮಸ್ಯೆಗಳು, ಅಡ್ಡಿ ಆತಂಕಗಳು, ಜೀವ ಬೆದರಿಕೆಗಳು, ಮಾನಸಿಕ ಒತ್ತಡಗಳು ಜೊತೆಯಲ್ಲಿರುವವರಿಂದಲೇ ಬೆನ್ನಿಗೆ ಚೂರಿ ಹಾಕುವಂತಹ ಕಾರ್ಯಗಳು, ಇಂತಹ ಸಕಲ ಸವಾಲುಗಳನ್ನು ಸ್ವೀಕರಿಸಿ, ಬಡಿದುಮಟ್ಟ ಹಾಕಿ, ಯಶಸ್ಸಿನ ಮೆಟ್ಟಿಲೇರಿದೆವು ಎಂದಾಗ ಸೇವೆ ಶ್ಲಾಘನೀಯವಾಗುತ್ತದೆ, ಜನ ಮನ್ನಣೆಯನ್ನು ಪಡೆಯುತ್ತದೆ. ಅಂತಹ ಧೀಮಂತ ಸೇವೆಗಳನ್ನು ಮಾಡುವ ಅವಕಾಶ ದೊರೆತಾಗ ಟೊಂಕ ಕಟ್ಟಿ, ಧೈರ್ಯದಿಂದ ಮುನ್ನುಗ್ಗಿ ಸಾಧಿಸಲು ಹಿಂಜರಿಯಬಾರದು, ಕಷ್ಟದ ಕೆಲಸಗಳನ್ನು ಇಷ್ಟಪಟ್ಟು ಸಾಧಿಸಿದರೆ ನಮ್ಮ ಜೀವನ ಸಾರ್ಥಕತೆ ಪಡೆಯುತ್ತದೆ.

ಸೇವೆ ಎಂದು ಹೇಳುವುದು ಸುಲಭ, ಆದರೆ ಮಾಡುವುದು ಕಷ್ಟ. **ಸೇವೆ ಎನ್ನುವುದು ವಿಶ್ವರೂಪಿ, ಸೇವೆಗಳು ಎನ್ನುವುದು ವಿಶ್ವವ್ಯಾಪಿ,** ಸೇವೆ ಎಂಬುದಕ್ಕೆ ವಿಶಾಲವಾದ ಅರ್ಥಗಳಿವೆ. ಭೂಮಂಡಲದಿಂದ ನಭೋ ಮಂಡಲದವರೆವಿಗೂ ನಾವು ಸೇವೆ ಸಲ್ಲಿಸಲು ವಿಫಲವಾದ ಅವಕಾಶಗಳಿವೆ. ಆದರೆ ನಮ್ಮ ಶಕ್ತಿ, ಜ್ಞಾನಗಳನ್ನು ಗಮನದಲ್ಲಿರಿಸಿಕೊಂಡು ಸೇವೆ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕಷ್ಟೇ. ಬಂಧುಗಳೇ, **ಹುಟ್ಟು ನಮ್ಮದಲ್ಲ, ಸಾವೂ ನಮ್ಮದಲ್ಲ ಆದರೆ ನಮ್ಮದು ಅಂತ ನಮ್ಮ ಜೊತೆ ಮತ್ತು ನಂತರ ಉಳಿಯುವುದು ನಾವು ಮಾಡಿರುವ ಸೇವೆಗಳು ಮಾತ್ರ.** ಅಂತಹ ಪವಿತ್ರ ಸೇವೆಯ ಸೇವಕರಾಗಿ ಒಂದಷ್ಟು ಜೀವಗಳಿಗೆ ಸಮಾಧಾನ ನೀಡಿ ಜನ್ಮ ಸಾರ್ಥಕ ಪಡಿಸಿಕೊಂಡು ಹುಟ್ಟಿಗೆ ಅರ್ಥ ಕೊಡಬೇಕಾದವರು ನಾವೇ ಅಲ್ಲವೇ...?

**ಒಂದು ಕಾಲದಲ್ಲಿ ಊರಿಗೊಂದು ಸೇವಾ ಸಂಸ್ಥೆಗಳು ಇದ್ದವು, ನಂತರ ಬೀದಿಗೊಂದು ಸೇವಾ ಸಂಸ್ಥೆಗಳು ಹುಟ್ಟಿಕೊಂಡವು,** ಪ್ರಸ್ತುತ ಮನೆ ಮನೆಯಲ್ಲೂ ಸೇವಾ ಸಂಸ್ಥೆಗಳು ಹುಟ್ಟಿಕೊಂಡು ಬಿಟ್ಟಿವೆ, ಇಲ್ಲಿ ಸೇವಾ ಸಂಸ್ಥೆಗಳೆಷ್ಟೋ, ಸ್ವಾಹಾ ಸಂಸ್ಥೆಗಳೆಷ್ಟೋ, ತೋರಿಕೆಗಿರುವ ಸಂಸ್ಥೆಗಳು ಎಷ್ಟೋ, ಭಗವಂತನೇ ಹೇಳಬೇಕು. ಕುಲಕ್ಕೊಂದು, ಮತಕ್ಕೊಂದು, ಒಂದೊಂದು ವಿಷಯಕ್ಕೆ ಒಂದೊಂದು ಸಂಘಗಳು ಇವೆ. ನಾವು ಎಷ್ಟು ಸಂಘಗಳಲ್ಲಿ ಇದ್ದೇವೆ ಎನ್ನುವುದಕ್ಕಿಂತಲೂ ಎಷ್ಟು ಉತ್ತಮ ಕೆಲಸ ಕಾರ್ಯಗಳನ್ನು ಸಮಾಜಕ್ಕೆ ಮುಟ್ಟಿಸಿದ್ದೇವೆ ಎನ್ನುವುದು ಮಾತ್ರ ಮುಖ್ಯವೇ ಹೊರತು ನಾವು ಇರುವ ಸಂಘ ಸಂಸ್ಥೆಗಳ ಸಂಖ್ಯೆ ನಗಣ್ಯ.

## ಇಂದಿನ ಸೇವಾ ಸಂಸ್ಥೆಗಳು...?

ಬಹುತೇಕ ನಾಗರೀಕರು ಒಂದಲ್ಲ ಒಂದು ಸೇವಾ ಸಂಸ್ಥೆಗಳ ಮೂಲಕ ಅಥವಾ ಅವರವರೇ ಗುಂಪುಗಳನ್ನು ಮಾಡಿಕೊಂಡು ಸೇವಾ ಕಾರ್ಯನಿರ್ವಹಿಸುತ್ತಿದ್ದಾರೆ, ಅದರಲ್ಲೂ ಕೆಲವು ಪ್ರಭಾವಿ ಸೇವಾ ಸಂಘಗಳಲ್ಲಿ ಅಧಿಕಾರಕ್ಕೆ ಬರಲು ಲಕ್ಷ–ಲಕ್ಷ/ಕೋಟ್ಯಾಂತರ ರೂಪಾಯಿಗಳನ್ನು ವ್ಯಯಿಸುತ್ತಾರೆ. ಅಧಿಕಾರದ ನಂತರ ಪರ–ವಿರೋಧಿಗಳ ಹಗ್ಗ ಜಗ್ಗಾಟ, ಮಿತಿ ಮೀರಿದರೆ, ಪೋಲೀಸ್ ಠಾಣೆ/ಕೋರ್ಟುಗಳ ಮೆಟ್ಟಿಲೇರಿ ಪರಸ್ಪರ ದೋಷಾರೋಪಣೆಯಂತಹ ಸಾಮಾಜಿಕ ಯುದ್ಧಕ್ಕಿಳಿಯುತ್ತಿದ್ದಾರೆ. ಇಂತಹ ಘಟನೆಗಳಿಂದ ಸಂಘದ ಹಣ ಪೋಲಾಗುವುದಲ್ಲದೆ ಪರಸ್ಪರ ದ್ವೇಷಗಳು ಬೆಳೆಯುತ್ತಿವೆ. ಸಂಘಟನಾ ಕೇಂದ್ರಗಳಾಗಬೇಕಿದ್ದ ಸಂಘಗಳಲ್ಲೇ ವಿಘಟನೆಗಳು ಆಗುತ್ತಿರುವ ಹಲವಾರು ಉದಾಹರಣೆಗಳು ನಮ್ಮ ಕಣ್ಮುಂದೆ ಇದೇ ಅಲ್ಲವೇ?

ಬಂಧುಗಳೇ, ನಾವು ಯಾವುದೇ ಸೇವಾ ಸಂಸ್ಥೆಯ ಸಮಿತಿಯೊಳಗೆ ಸೇರಿಕೊಳ್ಳುವ ಮುನ್ನ ಆ ಸಂಘದ ಕಾರ್ಯಕ್ರಮಗಳ ಬಗ್ಗೆ ನಮಗೆ ಅರಿವು ಇದ್ದು ಆ ಕಾರ್ಯಕ್ರಮಗಳನ್ನು ನಡೆಸುವ ಶಕ್ತಿ ನಮ್ಮಲ್ಲಿದ್ದರೆ ಮಾತ್ರ ನಾವು ಒಳಹೋಗಬೇಕು ಇಲ್ಲವೇ ಅಂತಹ ವ್ಯಕ್ತಿಗಳನ್ನು ಹುಡುಕಿ ಸಂಘದ ಸಮಿತಿಗಳಿಗೆ ಕಳುಹಿಸಿ ಆ ಸಂಸ್ಥೆಯ ಕಾರ್ಯಕ್ರಮಗಳು ಮತ್ತಷ್ಟು ಪರಿಣಾಮಕಾರಿಯಾಗಿ ನಡೆಯಲು ಸಹಕರಿಸಬೇಕು. ಪ್ರತಿಯೊಬ್ಬರು ತಿಳಿದುಕೊಳ್ಳಬೇಕಾದ ಸತ್ಯ ಏನೆಂದರೇ, ಸಭೆಗಳಲ್ಲಿ ಮಾತನಾಡುವುದಕ್ಕಿಂತ ಹೆಚ್ಚು ಸೇವಾ ಕಾರ್ಯಗಳನ್ನು ಮಾಡಿದಾಗ ಮಾತ್ರ ನಮ್ಮ ಸೇವೆಗೆ/ಇರುವಿಕೆಗೆ ಅರ್ಥ ಬರುತ್ತದೆ. **ನಮಗೆ ದೊರೆಯುವ ಚಿಕ್ಕ–ಚಿಕ್ಕ ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಂಡು ಮನ ಮುಟ್ಟುವಂತೆ, ಮನಮೆಚ್ಚುವಂತೆ, ಹೃದಯಕ್ಕೆ ಹತ್ತಿರವಾಗುವಂತಹ ಕೆಲಸಗಳಿಂದ ಅಬಲರ ಮೊಗದಲ್ಲಿ ಮಂದಹಾಸ ಮೂಡುವಂತೆ, ಕಷ್ಟದಲ್ಲಿರುವ ಬಂಧುಗಳಿಗೆ ನೆರವು ನೀಡಬೇಕು. "ಸೇವೆ" ಬದುಕನ್ನು ಕಲಿಸುವುದು, ಬದುಕಿಗೆ ಅರ್ಥ ಕೊಡುವುದು ಸೇವೆ, ನಮ್ಮೊಂದಿಗೆ–ನಮ್ಮ ನಂತರವೂ ನಮ್ಮನ್ನು ಉಳಿಸಿ–ಬೆಳೆಸಿ–ಪೋಷಿಸುವುದು ಸೇವೆ.** ಅಂತಹ ಸೇವೆಯ ಸೇವಾ ವ್ರತಿಗಳಾಗಿ ಜೀವನವನ್ನು ಪಾವನವನ್ನಾಗಿಸಿಕೊಳ್ಳುವ ಸದಾಚಾರ ಸಂಪನ್ನತೆಯನ್ನು ಪ್ರತಿಯೊಬ್ಬ ಸೇವಾ ವ್ರತಿಗೂ ಭಗವಂತನು ಕರುಣಿಸಲೆಂದು ಕೋರುವ,

**ರಾ ಪ ರವಿಶಂಕರ್, ಅಧ್ಯಕ್ಷರು**

ಹೆಚ್ಚಿನ ಮಾಹಿತಿಗಳಿಗಾಗಿ ಕರ್ನಾಟಕ ಆರ್ಯವೈಶ್ಯ ಮಹಾಸಭಾದ Social Media Page ಗಳನ್ನು visit ಮಾಡಿ | Karnataka Aryavysya Mahasabha

## ಬೆಂಗಳೂರು ನಗರದ

# ರಾಣಿ ಅಬ್ಬಕ್ಕ ಆಟದ ಮೈದಾನದಲ್ಲಿ ಝೇಂಕರಿಸಿದ 13ನೇ ಪ್ರತಿಭೋತ್ಸವ



ಬಂಗಾರ ವರ್ಣದ ರಥಗಳಲ್ಲಿ ವಿರಾಜಮಾನಳಾಗಿರುವ ಶ್ರೀವಾಸವಿ ಮಾತೆ

ಹೆಜ್ಜೆ ಹೆಜ್ಜೆಯಲ್ಲಿ ನಮ್ಮ ಅಜ್ಞಾನವನ್ನು ಕಂಡುಕೊಳ್ಳುತ್ತಾ ಹೋಗುವುದೇ ಶಿಕ್ಷಣ. ಅಂತಹ ಶಿಕ್ಷಣ ಕ್ಷೇತ್ರದಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದು ಸಾಧನೆ ಮಾಡಿರುವ 2022–2023ನೇ ಶೈಕ್ಷಣಿಕ ಸಾಲಿನ ರಾಜ್ಯಾದ್ಯಂತ ಇರುವ ವಿದ್ಯಾರ್ಥಿಗಳನ್ನು ಒಂದೇ ವೇದಿಕೆಗೆ ತಂದು ಅವರ ಸಾಧನೆಯನ್ನು ಸಮಾಜಕ್ಕೆ ಪರಿಚಯಿಸಿ, ಸಹಸ್ರ ಸಹಸ್ರ ಬಂಧುಗಳ ಸಮ್ಮುಖದಲ್ಲಿ ಪ್ರತಿಭಾ ಮಾಣಿಕ್ಯಗಳನ್ನು ಅಭಿನಂದಿಸಿ ಅವರಲ್ಲಿ ಮತ್ತು ಸ್ಫೂರ್ತಿಯನ್ನು, ಚೈತನ್ಯವನ್ನು ತುಂಬಿ ದೇಶದ ಆಸ್ತಿಯನ್ನಾಗಿ, ನಮ್ಮ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ ಸ್ವಾಭಿಮಾನಿಗಳಾಗಿ ಬೆಳಗುವಂತೆ ಮಾಡುವ ಕಾರ್ಯಕ್ರಮವೇ ಪ್ರತಿಭೋತ್ಸವ.

2011ನೇ ವರ್ಷದಲ್ಲಿ ಪ್ರಾರಂಭವಾದ ಮಹಾಸಭೆಯ ಈ ಮಹೋನ್ನತ ಕಾರ್ಯಕ್ರಮದಲ್ಲಿ ಪ್ರತೀವರ್ಷವೂ 1500ಕ್ಕೂ ಮೀರಿದ ಪ್ರತಿಭಾಸಂಪನ್ನ ವಿದ್ಯಾರ್ಥಿಗಳನ್ನು ಅತ್ಯಂತ ಅಭೂತಪೂರ್ವವಾಗಿ ಸಮಾಜವೇ ಎದ್ದು ಕುಣಿಯುವಂತೆ ಮಾಡಲಾಗುತ್ತದೆ. ಪ್ರತೀವರ್ಷವೂ ರಾಜ್ಯದ ನಾನಾ ಭಾಗಗಳಲ್ಲಿ ನಡೆಯುವ ಪ್ರತಿಭೋತ್ಸವ ಈ ಬಾರಿ ಬೆಂಗಳೂರು ನಗರದಲ್ಲಿ **2023ನೇ ನವೆಂಬರ್ 5 ರಂದು** ನಡೆಯಿತು. ಪ್ರತಿಭಾವಂತ ವಿದ್ಯಾರ್ಥಿಗಳ ಚೈತನ್ಯಕ್ಕೆ ಮತ್ತಷ್ಟು ಸ್ಫೂರ್ತಿಯನ್ನು ತುಂಬುವಲ್ಲಿ ಯಶಸ್ವಿಯಾಯಿತು ಎಂದರೇ ಅತಿಶಯೋಕ್ತಿಯಾಗಲಾರದು.

## ಪ್ರತಿಭೋತ್ಸವ–2023

2022–2023ನೇ ಶೈಕ್ಷಣಿಕ ಸಾಲಿನಲ್ಲಿ ಎಸ್ ಎಸ್ ಎಲ್ ಸಿ ಮತ್ತು ಅಂತಿಮ ಪಿ ಯು ಸಿಯಲ್ಲಿ ಶೇ 90% ಹಾಗೂ ಹೆಚ್ಚು ಅಂಕಗಳನ್ನು, ಪದವಿ ಪರೀಕ್ಷೆಗಳಲ್ಲಿ distinction ಪಡೆದ ವಿದ್ಯಾರ್ಥಿಗಳು ಹಾಗೂ ಇದೇ ಸಾಲಿನಲ್ಲಿ ಪಿ ಹೆಚ್ ಡಿ ಪಡೆದುಕೊಂಡಿರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ಇದಕ್ಕೆ ಸ್ಪಂದಿಸಿದ ರಾಜ್ಯಾದ್ಯಂತ ಇರುವ ನಮ್ಮ ಸದಸ್ಯ ಬಾಂಧವರ ಮಕ್ಕಳು ಅತ್ಯಂತ ಹುರುಪಿನಿಂದ ಭಾಗವಹಿಸಿ, **ONLINE ಮೂಲಕ 1919 ವಿದ್ಯಾರ್ಥಿಗಳು** ಪ್ರತಿಭೋತ್ಸವದಲ್ಲಿ ಗೌರವ ಪಡೆದುಕೊಳ್ಳಲು ಅರ್ಜಿಯನ್ನು ಸಲ್ಲಿಸಿದ್ದರು. ಇಂತಹ ಎಲ್ಲಾ ಅರ್ಜಿಗಳ ಪರಿಪೂರ್ಣ ಪರಿವೀಕ್ಷಣೆಯಾಗಿ ಅಂತಿಮವಾಗಿ 1530 ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರ ಪಡೆದುಕೊಳ್ಳಲು ಅರ್ಹತೆ ಪಡೆದುಕೊಂಡರು.

**ಎಸ್ ಎಸ್ ಎಲ್ ಸಿ ಮತ್ತು ಪಿ ಯು ಸಿಯಲ್ಲಿ ಶೇ 90% ಮೇಲ್ಪಟ್ಟು ಅಂಕ ಪಡೆದುಕೊಂಡಿರುವ ವಿದ್ಯಾರ್ಥಿಗಳು ಕ್ರಮವಾಗಿ 358 ಮತ್ತು 443, Distinction ಪಡೆದ ಪದವಿ ವಿದ್ಯಾರ್ಥಿಗಳ ಸಂಖ್ಯೆ 576 ಸ್ನಾತಕೋತ್ತರ ವಿದ್ಯಾರ್ಥಿಗಳು 82, ಚಿನ್ನದ ಪದಕ ಪುರಸ್ಕೃತ ವಿದ್ಯಾರ್ಥಿಗಳು 5, ರ್‍ಯಾಂಕ್ ವಿಜೇತರು 10, ಎಸ್ ಎಸ್ ಎಲ್ ಸಿ ಮತ್ತು ಪಿ.ಯು.ಸಿಯಲ್ಲಿ 4 ಕ್ಕಿಂತ ಹೆಚ್ಚು ವಿಷಯಗಳಲ್ಲಿ 100ಕ್ಕೆ 100 ಅಂಕ ಪಡೆದವರು 23.**

## ಸಾಧಕ ವಿಜ್ಞಾನಿಗಳು

ವಿಶ್ವವೇ ನಿಬ್ಬೆರಗಾಗುವಂತೆ ಮಹಾಸಾಧನೆ ಮಾಡಿದ ಭಾರತ ದೇಶದ ಇಸ್ರೋ ಸಂಸ್ಥೆಯ ವಿಜ್ಞಾನಿಗಳ ಕಾರ್ಯಕ್ಷಮತೆ ಬರೆಯಲು ಪದಗಳು ಸಾಲದು. **ಚಂದ್ರಯಾನ–3, ಮತ್ತು ಆದಿತ್ಯ ಎಲ್1** ತಂಡದಲ್ಲಿ ಕಾರ್ಯನಿರ್ವಹಿಸಿರುವ ನಮಗೆ ತಿಳಿದು ಬಂದ ಸುಮಾರು 12 ಜನ ನಮ್ಮ ಸಮುದಾಯದ ವಿಜ್ಞಾನಿಗಳನ್ನು ಇದೇ ಸಂದರ್ಭದಲ್ಲಿ ಅಭೂತಪೂರ್ವವಾಗಿ ಅಭಿನಂದಿಸಲಾಯಿತು. **ಶ್ರೀಯುತರ ಪರಿಚಯವನ್ನು 4ನೇ ಪುಟದಲ್ಲಿ ನೀಡಲಾಗಿದೆ.**





ವಿಶ್ವದಲ್ಲಿ ಭಾರತದ ಗೌರವವನ್ನು ಹೆಚ್ಚಿಸಿದ ಸಮುದಾಯದ ISRO ವಿಜ್ಞಾನಿಗಳು

ನಿರೀಕ್ಷೆಯಂತೆ ರಾಣಿ ಅಬ್ಬಕ್ಕ ಕ್ರೀಡಾಂಗಣ ಪ್ರತಿಭಾ ಮಾಣಿಕ್ಯಗಳ ಪೋಷಕರು ಹಾಗೂ ಬಂಧುಗಳಿಂದ ತುಂಬಿ ತುಳುಕುತ್ತಿತ್ತು. ಮೈದಾನವಿಡಿ ಸೇರಿದ್ದ ಜನಸ್ತೋಮ ಸಾಗರದಂತೆ ವಿಸ್ತಾರವಾಗಿ ಕಂಗೊಳಿಸುತ್ತಿತ್ತು ಸಮಾರಂಭದ ಮುಖ್ಯ ಅತಿಥಿಗಳೆಲ್ಲರೂ ಸಮಯಕ್ಕೆ ಸರಿಯಾಗಿ ಆಗಮಿಸಿದ್ದು ಸಮಯ ಪರಿಪಾಲನೆಯ ಶಿಸ್ತನ್ನು ಹೇಳಿ ಮಾಡಿಸಿದಂತಿತ್ತು. ತುಮಕೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ **ಶ್ರೀ ವೆಂಕಟೇಶ್ವರಲು**ರವರು ರಾಷ್ಟ್ರಧ್ವಜಾರೋಹಣ ನೆರವೇರಿಸಿ ಕೊಟ್ಟರು. ಮಹಾಲಕ್ಷ್ಮೀಪುರದ ವಾಸವಿ ಮಹಿಳಾ ಸಂಘದ ಕಲಾವಿದರು ಅತ್ಯಂತ ಶ್ರುಶ್ರಾವ್ಯವಾಗಿ ರಾಷ್ಟ್ರಗೀತೆ ಹಾಡುವ ಮೂಲಕ ಕಾರ್ಯಕ್ರಮಗಳು ಪ್ರಾರಂಭವಾದವು. ಮಹಾಸಭಾ ಅಧ್ಯಕ್ಷರಾದ ಶ್ರೀ ಆರ್ ಪಿ ರವಿಶಂಕರ್‌ರವರು ಕರ್ನಾಟಕ ಆರ್ಯವೈಶ್ಯ ಮಹಾಸಭೆ ಬೆಳೆದು ಬಂದ ಹಾದಿ ಹಾಗೂ ಅದರ ಸಾಧನೆಗಳು ಶತಮಾನಗಳಿಂದಲೂ ನಾಗರೀಕ ಸಮಾಜಕ್ಕೆ ನೀಡುತ್ತಾ ಬಂದಿರುವ ಸೇವೆಗಳ ಬಗ್ಗೆ ಮಾಹಿತಿಗಳನ್ನು ನೀಡಿ ಅತಿಥಿಗಣ್ಯರನ್ನು, ವಿದ್ಯಾರ್ಥಿಗಳನ್ನು, ಸಭಿಕರನ್ನು ಹೃದಯತುಂಬಿ ಸ್ವಾಗತಿಸಿದರು.

13ನೇ ಪ್ರತಿಭೋತ್ಸವವನ್ನು ಉದ್ಘಾಟಿಸಿ ಮಾತನಾಡಿದ **ರಾಜ್ಯದ ಗೃಹ ಸಚಿವರಾದ ಡಾ. ಜಿ ಪರಮೇಶ್ವರ್**ರವರು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಅಭಿನಂದಿಸಿ ತಮ್ಮ ಸಾರ್ವಜನಿಕ ಜೀವನದ ಹಾದಿಯಲ್ಲಿ ಆರ್ಯವೈಶ್ಯ ಸಮಾಜದ ಬಂಧುಗಳ ಒಡನಾಟವನ್ನು ನೆನಸಿಕೊಂಡರು. ಮುಂದುವರೆದಂತೆ ತುಮಕೂರು ನಗರದ ಶ್ರೀ ಅನಂತರಾಮ್ ಶೆಟ್ಟಿರವರ ಸೇವೆ ಹಾಗೂ ಸಹಕಾರ ನೆನೆದು ಇಂದಿನ ನಮ್ಮ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಶ್ರೀ ಅನಂತರಾಮ್ ಶೆಟ್ಟಿರವರ ಸಹಕಾರ ಮರೆಯುವಂತಿಲ್ಲ ಎಂಬ ಅಭಿಮಾನದ ನುಡಿಗಳನ್ನು ನುಡಿತು ISROದ ಚಂದ್ರಯಾನ 3 ಮತ್ತು ಆದಿತ್ಯ L1 ಯೋಜನೆಗಳಲ್ಲಿ ಕಾರ್ಯನಿರ್ವಹಿಸಿದ್ದ ಆರ್ಯವೈಶ್ಯ ಸಮಾಜದ 12 ವಿಜ್ಞಾನಿಗಳನ್ನು ಶುಭಕೋರಿ ಅಭಿನಂದಿಸಿದರು

ಸರಿಸುಮಾರು 1530 ವಿದ್ಯಾರ್ಥಿಗಳನ್ನು 24 ತಂಡಗಳಾಗಿ ವಿಂಗಡಿಸಿ ಒಂದೊಂದು ತಂಡವನ್ನು ಒಬ್ಬೊಬ್ಬ ಮುಖ್ಯ ಆಹ್ವಾನಿತರು ಅತ್ಯಂತ ಗೌರವ ಪೂರ್ವಕವಾಗಿ ಅಭಿನಂದಿಸಿ, ಪ್ರತಿಭಾ ಮಾಣಿಕ್ಯಗಳಿಗೆ ಶುಭಕೋರಿದರು. ಈ ಸಂದರ್ಭದಲ್ಲಿ ಮಾತನಾಡಿದ **ಶಾಸಕರಾದ ಶ್ರೀ ಗೋಪಾಲಯ್ಯ**ನವರು ಒಂದು ಸಮುದಾಯದ ವತಿಯಿಂದ ಇಷ್ಟೊಂದು ಬೃಹತ್‌ಆದ ಕಾರ್ಯಕ್ರಮ ನಡೆಯುತ್ತಿರುವುದು ಕಂಡು ಸಂತೋಷವಾಗುತ್ತದೆ. ಪ್ರತಿ ವರ್ಷವೂ ತಾವು ಇದೇ ಮೈದಾನದಲ್ಲಿ ಕಾರ್ಯಕ್ರಮವನ್ನು ನಡೆಸಿ ನಾನು ಎಲ್ಲ ರೀತಿಯ ಸಹಕಾರವನ್ನು ನೀಡುತ್ತೇನೆಂದು ವಿಶ್ವಾಸದ ಮಾತುಗಳನ್ನು ನುಡಿದರು.




ಅಭಿನಂದನೆ ಸ್ವೀಕರಿಸುತ್ತಿರುವ ವಿದ್ಯಾ ಮಾಣಿಕ್ಯಗಳು

**ಕಾರ್ಯಕ್ರಮ:** ದಿನಾಂಕ 5–11–2023ರಂದು ಬೆಂಗಳೂರು ಮಹಾನಗರದ ಮಹಾಲಕ್ಷ್ಮೀಪುರದಲ್ಲಿರುವ ರಾಣಿ ಅಬ್ಬಕ್ಕ ಆಟದ ಮೈದಾನದಲ್ಲಿ ನಿರ್ಮಾಣ ಮಾಡಿದ್ದ ಬೃಹತ್ ಪೆಂಡಾಲ್‌ನ, ವರ್ಣರಂಜಿತ ವೇದಿಕೆಯಲ್ಲಿ ಬೆಳಿಗ್ಗೆ 10.30 ರಿಂದ ಮಧ್ಯಾಹ್ನದವರೆವಿಗೂ ಅಭೂತಪೂರ್ವವಾಗಿ ನಡೆಯಿತು.

ರಾಜ್ಯದ ನಾನಾ ಮೂಲೆಗಳಿಂದ ಬೆಳ್ಳಂಬೆಳಗ್ಗೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಕಾರ್ಯಕ್ರಮದ ವೇದಿಕೆಗೆ ಹತ್ತಿರವಿರುವ ಕಲ್ಯಾಣಮಂಟಪಗಳಲ್ಲಿ ತಂಗಲು, ಸ್ನಾನ, ಶೌಚಾದಿಗಳಿಗೆ ಅನುಕೂಲ ಮಾಡಿಕೊಡಲಾಗಿತ್ತು. ಬೆಳಿಗ್ಗೆ 7.00 ಘಂಟೆಯಿಂದಲೇ ತಂಡೋಪತಂಡವಾಗಿ ಮಹಾಲಕ್ಷ್ಮೀಪುರದಲ್ಲಿರುವ ಶ್ರೀ ವಾಸವಿ ದೇವಾಲಯದ ಬಳಿ ಜಮಾಯಿಸಲಾರಂಭಿಸಿದರು. ಶ್ರೀ ಮಾತೆಯ ದರ್ಶನ ಪಡೆದು, ಉಪಹಾರ ಸೇವಿಸಿ, ನಿಗದಿತ ಸ್ಥಳಗಳಲ್ಲಿ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡು ತಮ್ಮ ಬ್ಯಾಡ್ಜ್‌ಗಳನ್ನು ಪಡೆದುಕೊಂಡು ಪ್ರತಿಭಾ ಶೋಭಾಯಾತ್ರೆಗೆ ಸಂಭ್ರಮಗಳಿಂದ ಉತ್ಸುಕರಾಗಿ ಸಿದ್ಧವಾಗಿದ್ದನ್ನು ವರ್ಣಿಸಲು ಅಸಾಧ್ಯ.



13ನೇ ಪ್ರತಿಭೋತ್ಸವ ಕಾರ್ಯಕ್ರಮ ಉದ್ಘಾಟನೆ ಮಾಡುತ್ತಿರುವ ಮಾನ್ಯ ಗೃಹ ಮಂತ್ರಿಗಳು ಹಾಗೂ ಇತರ ಆಹ್ವಾನಿತರು

ಸಂಘಟಕರು ಬೆಳಿಗ್ಗೆ 8.30ಕ್ಕೆ ಶ್ರೀ ವಾಸವಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ನಿರ್ವಿಘ್ನವಾಗಿ ಕಾರ್ಯಕ್ರಮವು ನಡೆಯಬೇಕೆಂದು ಪ್ರಾರ್ಥಿಸಲಾಯಿತು. ನಮ್ಮ ಗೌರವ ಸ್ವೀಕರಿಸಲು ಆಗಮಿಸಿದ್ದ ಇಸ್ರೋ ಸಂಸ್ಥೆಯ 12 ಜನ ವಿಜ್ಞಾನಿಗಳು ಸಂಕಲ್ಪ ಪೂಜೆಯಲ್ಲಿ ಜೊತೆಗೆ ಇದದ್ದು ವಿಶೇಷವಾಗಿತ್ತು.

ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ್ದ ಸಾವಿರಾರು ವಿದ್ಯಾರ್ಥಿಗಳು ಹಾಗೂ ಪೋಷಕರು ಅತ್ಯಂತ ಸಂಭ್ರಮದಿಂದ ಶೋಭಾಯಾತ್ರೆಗೆ ಅಣಿಯಾಗಿದ್ದರು. ರ್‍ಯಾಂಕ್ ವಿಜೇತರು, ಚಿನ್ನದ ಪದಕ ವಿಜೇತರು ಹಾಗೂ ಇಸ್ರೋ ವಿಜ್ಞಾನಿಗಳ ತಂಡ 14 ರಥಗಳಲ್ಲಿ ವಿರಾಜಮಾನರಾದರು ನಾದಸ್ವರ, ಜಾನಪದನೃತ್ಯತಂಡಗಳ ಮೇಳದೊಂದಿಗೆ ವಿದ್ಯಾರ್ಥಿಗಳ ಸಾಧನೆಗೆ ಜೈಕಾರಗಳು ಮುಗಿಲು ಮುಟ್ಟಿತ್ತು.

9.00 ಘಂಟೆಗೆ ಸರಿಯಾಗಿ **ಶ್ರೀ ನೆ ಲ ನರೇಂದ್ರ ಬಾಬು, ಮಾಜಿ ಶಾಸಕರು,** ಹಾಗೂ ಸ್ಥಳೀಯ ಸಂಘದ ಗೌರವ ಅಧ್ಯಕ್ಷರಾದ **ಶ್ರೀ ಡಿ ಕೆ ಸತ್ಯನಾರಾಯಣ ಶೆಟ್ಟಿ**ಯವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು, ನಂತರ ಬಂಗಾರ ವರ್ಣದ ರಥದಲ್ಲಿ ವಿರಾಜಮಾನವಾಗಿ ಕಂಗೊಳಿಸುತ್ತಿದ್ದ ಶ್ರೀ ವಾಸವಿ ಮಾತೆಗೆ ಪುಷ್ಪಾರ್ಚನೆ ಮಾಡಿ, ಹಸಿರು ನಿಶಾನೆ ತೋರುವ ಮೂಲಕ ಪ್ರತಿಭಾ ಶೋಭಾಯಾತ್ರೆಗೆ ಚಾಲನೆ ನೀಡಿದರು.

ಜನಸಾಗರದ ನಡುವೆ ವಾಸವಿ ಮಾತಾಕೀ ಜೈ ಘೋಷಣೆಗಳು ಮುಗಿಲು ಮುಟ್ಟಿದವು. ವಿದ್ಯಾರ್ಥಿಗಳಿಗೆ ದಾರಿಯುದ್ದಕ್ಕೂ ಹೂಮಳೆಗೆರೆಲಾಯಿತು. ಮಹಾಲಕ್ಷ್ಮೀಪುರದ ಮಹಿಳಾಸಂಘದವರ ಕೋಲಾಟ ಶೋಭಾಯಾತ್ರೆಗೆ ಮೆರಗು ನೀಡಿತ್ತು, ಯುವಜನ ಸಂಘದ ಕಾರ್ಯಕರ್ತರ ಶ್ರಮದಿಂದ ಮೆರವಣಿಗೆ ಸಮಯಕ್ಕೆ ಸರಿಯಾಗಿ ಪ್ರಾರಂಭವಾಗಿ ದಾರಿಯುದ್ದಕ್ಕೂ ಪುಷ್ಪವೃಷ್ಠಿಯೊಂದಿಗೆ 9.50ಕ್ಕೆ ರಾಣಿ ಅಬ್ಬಕ್ಕ ಆಟದ ಮೈದಾನದಲ್ಲಿ ನಿರ್ಮಾಣವಾಗಿದ್ದ ಅದ್ದೂರಿ ಸಭಾಂಗಣಕ್ಕೆ ಸೇರಿತು.

**ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ ಎಸ್ ಅರುಣ್**ರವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ ನಿಮ್ಮ ಪ್ರತಿಭೆಯನ್ನು ದೇಶಕ್ಕೆ ಸಮರ್ಪಣೆ ಮಾಡಿ ಪ್ರತಿಭಾ ಫಲಾಯನವಾಗುವುದು ಬೇಡ ಎಂಬ ಕಿವಿಮಾತನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. **ಮಾಜಿ ಶಾಸಕರಾದ ಶ್ರೀ ಎಚ್ ಪಿ ಮಂಜುನಾಥ್**ರವರು ಮಾತನಾಡಿ ಲಕ್ಷ್ಮೀಪುತ್ರರಾಗಿದ್ದ ನಮ್ಮ ಸಮಾಜದ ವಿದ್ಯಾರ್ಥಿಗಳು ಇಂದು ಸರಸ್ವತಿ ಪುತ್ರರಾಗಿದ್ದಾರೆ ದೇಶದ ಅಭಿವೃದ್ಧಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂದು ತಿಳಿಸಿದರು. **ಮಾಜಿ ಉಪ ಮುಖ್ಯಮಂತ್ರಿಗಳಾದ ಡಾ. ಸಿ ಎನ್ ಅಶ್ವಥ್‌ನಾರಾಯಣ್**ರವರು ಮಾತನಾಡಿ ಇಂದು ನಮ್ಮ ದೇಶದಲ್ಲಿ ಹೊಸ ಆವಿಷ್ಕಾರಗಳು ಪ್ರತಿನಿತ್ಯವೂ ಬೆಳೆಯುತ್ತಿದೆ, ಶಿಕ್ಷಣದಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎಂದು ಕರೆ ನೀಡಿ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರಿಗೆ ಉಟೋಪಚಾರದ ಸಾಮಗ್ರಿಗಳನ್ನು ನೀಡಿ ಸಹಕರಿಸಿದ್ದ **ಶ್ರೀ ನಂದಕುಮಾರ್,** ರವಿಕುಮಾರ್ ಟ್ರೇಡಿಂಗ್ ಕಂಪನಿ ಎ ಪಿ ಎಂ ಸಿ ಯಾರ್ಡ್ ಬೆಂಗಳೂರುರವರ ಅನುಪಸ್ಥಿತಿಯಲ್ಲಿ ಅವರ ಸೇವೆಯನ್ನು ಸ್ಮರಿಸಲಾಯಿತು. M/s SLN FOREX SERVICES PVT LTD ರವರು ನೆನಪಿನ ಕಾಣಿಕೆಗೆ ನೀಡಿದ ಸಹಕಾರವನ್ನು ಗೌರವಿಸಿ ಸಂಸ್ಥೆಯ ಮಾಲೀಕರಾದ **ಶ್ರೀ ಆರ್ ಪಿ ನಾರಾಯಣ**ರವರನ್ನು ಅಭಿನಂದಿಸಲಾಯಿತು.



ಸಾಗರೋಪಾದಿಯಲ್ಲಿ ಕಾರ್ಯಕ್ರಮಕ್ಕೆ ಆಗಮಿಸಿದ್ದ ಜನಸ್ತೋಮ

ಕಾರ್ಯಕ್ರಮದ ಆರಂಭದಲ್ಲಿ 45 ನಿಮಿಷಗಳ ಕಾಲ ತಮ್ಮ ಆಕರ್ಷಕ ನೃತ್ಯಗಳ ಮೂಲಕ ಕಲಾ ವೈಭವವನ್ನು ಮೆರೆಸಿದ ಕುಮಾರಿ **ಭಾವನಾ ಮತ್ತು ತಂಡ** ಹಾಗೂ **ಕಲಾ ಸಂಕಲ್ಪ ನೃತ್ಯ ತಂಡ**ದವರನ್ನು ಅಭಿನಂದಿಸಲಾಯಿತು. ಒಟ್ಟು ಕಾರ್ಯಕ್ರಮದ ನಿರೂಪಣೆಯನ್ನು ಖ್ಯಾತ ಆಪ್ತ ಸಮಾಲೋಚಕರು ಆದ **ಶ್ರೀ ಸುಭಾಷ್**ರವರು ಅತ್ಯಂತ ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಮಹಾಲಕ್ಷ್ಮೀಪುರದ ಪ್ರತಿಯೊಬ್ಬ ಆರ್ಯವೈಶ್ಯ ಬಂಧುಗಳು ಕಾರ್ಯಕ್ರಮದ ಯಶಸ್ಸಿನ ಪಾಲುದಾರರಾಗಿ ಸಹಕರಿಸಿದರು. ಪೂರ್ಣ ಕಾರ್ಯಕ್ರಮ ಶಿಸ್ತುಭದ್ದಾಗಿ ನಡೆಯಲು **ವೈಶ್ಯ ಹಾಸ್ಟೆಲ್ ಹಾಗೂ MAVS ಹಾಸ್ಟೆಲ್** ವಿದ್ಯಾರ್ಥಿಗಳ ಶ್ರಮ ಪ್ರಮುಖ ಪಾತ್ರ ವಹಿಸಿತು. ವಿದ್ಯಾರ್ಥಿಗಳಿಗೆ ಅವಶ್ಯವಿರುವ 1500 ಕ್ಯಾರಿಬ್ಯಾಗ್‌ಗಳನ್ನು BAG FACTORY ಸಂಸ್ಥೆಯ ಪಾಲುದಾರರಾದ **ಶ್ರೀ ವಿ ಆರ್ ಶರತ್**ರವರು ನೀಡಿ ಸಹಕರಿಸಿದ್ದಾರೆ.

**ವರದಿ: ಶ್ರೀ ರೂಪಸಿ ರಮೇಶ್** ನಿರ್ದೇಶಕರು, ಕರ್ನಾಟಕ ಆರ್ಯವೈಶ್ಯ ಮಹಾಸಭೆ

# ಸಾಧಕ ISRO ವಿಜ್ಞಾನಿಗಳಿಗೆ ಅಭಿನಂದನೆಗಳು




## Srikanth M

He served as a operation director for MARS Mission. He also worked as deputy mission director for chandrayan 2 which cross landed in 2019.

He served as mission director for Chandrayan 3.

## M K Murahari




BE( E&C from UVCE Bengaluru) and Student of Vasavi Hostel, VV Puram, Bengaluru. He is serving as Deputy Project Director for Avionics System for Gaganayaan at ISRO since 1991 as Project Engineer , Project Manager, Deputy Project Director for Power System of various Communication and remote sensing satellite.

### His Contribution

in Chandrayana Program - Power Generation, power Storage Distribution Control and Protection




## MADISETTY VENKATA RAMANA

M.Tech: NIT-DURGAPUR YEAR-1995 Specialisation: Mechine design & Production Engineering

### His Professional Experience:

Serverd as Faculty in Mechanical Engineering dept. Adhiyamaan college of Engineering-Hosur from 1996 to 2000 after completing M.Tech. Working as Scientist in U R Rao Satellite Centre, ISRO, Bangalore since year 2000. Resposible for development of Mechanisms for Satellites.

### His Major Contribution:

> Deputy Project Director-Mars Orbiter Mission (MOM) and responsible for delvery of mechanisms. ISRO/India is the first country to be successful in first attempt in Mars mission. > Developed and delivered New Mechanism(Non-Pyro technique device) for chandrayaana and Aditya-L1 mission > ISRO Award: Received ISRO team awards in the Year 2012 for contribution towards technology development. > Patents and Publications: Received 02 patents and awaiting Patent certificates for 03 more technologies developed Published a dozen papers in National & International conferences and journals.

## RAMESH GUPTA KALAVALA VENKATA




Education: Diploma (E & C) from Government Polytechnic, Anantapur, A.P

### Professional Experience:

• He is Working as Scientist/Engineer in U R Rao Satellite Centre, ISRO, Bengaluru since 1997. Completed 26 years of Service in various capacities from Junior Scientist to Division Head Level. Presently working as Division Head, Power systems Assurance Division.

### His Major Contributions:

> Contributed to the realization of Power system of many ISRO made satellites in the capacity of project Engineer, Project Manager, Deputy Project Director, Section Head and Division Head. > Some of the Prestigious projects include recent successful Chandrayaan – 3, Aditya L1 and future mission like Gaganyaan.

ADTV




## K A Harish

M SC Electronics from Hema Gangotri, Hassan He is working as Manager , ITF - ISTRAC in ISRO He started his career in December 1998 as Scientific Assistant B at Master Control Facility -Hassan from 1998 to 2010.

From Jan 2010 He promoted to ISTRAC as Scientific/Engineer C Contributed for successful Operation of remote sensing satellites, Oceanography Satellites, Interplanetary mission and vital mission support for Chandrayana 1,2 & 3 Mars Orbitary Mission.

## K.S.SANJEEV KUMAR




Scientist/Engineer 'SG' B.E (Electronics & Communication) He is working at URSC/ISRO Since 33 Years. He is Expertise in

**Mission Operations :** Mission Operations Director for eight ISRO satellite Missions **IT Infrastructure:** >Headed Software development facility catering to development of satellite Management,control & Monitoring software deployed in various ISRO satellite control centres & earth station around th globe > Setting up & Heading of Mission Analysis Centre (MAC) used for Real time & offline analysis of Health of all ISRO satellite Missions at U R Rao Satellite Centre. Launch operations of all ISRO missions will be conducted from MAC along with Satellite Control Centre.

**His Involvement in Chandrayaan-3 & Aditya-L1 mission :** Headed the facility which developed mission software for Control & Management of Chandrayaan-3 & Aditya-L1 mission > Involved in Data flow of Chandrayaan-3 Hot & Cold test as a part Pre-launch qualification tests > Involved in Launch & Mission operations of Chandrayaan-3 & Aditya-L1




## Smaran

BTech in Avionics from Indian Institute of Space science and Technology (IIST) Trivandrum.
His Contribution in Chandrayana 3 and Aditya L1 is realisation of some of the critical sensors and payload.




## Durga Rao Mamidi

M Tech, AMIE in Mechanical Engineering Working as Scientist SE in ISRO Bengaluru and in the Domin of Mechanical System Area since Last 16 years His Contribution in Chandrayana 3 and Aditya L1 in Mechanical Activities.




## ಶ್ರೀ ಟಿ.ಎಸ್ ಗೋವಿಂದರಾಜ ಶ್ರೇಷ್ಠಿ

ಜಗತ್ತು ನಿಬ್ಬೆರಗಾಗಿ ನೋಡುತ್ತಿರುವ ಭಾರತೀಯರೆಲ್ಲರ ಹೆಮ್ಮೆಯ ಪ್ರತೀಕವೆನಿಸಿದ ಚಂದ್ರಯಾನ-3ರ ಯೋಜನೆಯಲ್ಲಿ ವಿಶಿಷ್ಟ ಪಾತ್ರವನ್ನು ವಹಿಸಿದ ಹಲವು ಪ್ರಮುಖ ವಿಜ್ಞಾನಿಗಳಲ್ಲಿ ಶ್ರೀ ಟಿ.ಎಸ್ ಗೋವಿಂದರಾಜ ಶ್ರೇಷ್ಠಿಯವರ ಪಾತ್ರ ಅನುಪಮ ಹಾಗೂ ಅನನ್ಯ. ಚಿತ್ರದುರ್ಗದ ಎಸ್.ಜೆ.ಎಂ.ಐ.ಟಿ ಕಾಲೇಜಿನಲ್ಲಿ ಬಿ.ಇ ಮೆಕಾನಿಕಲ್ ಇಂಜಿನಿಯರ್ ಪದವೀಧರರಾದರು.

1998ರಲ್ಲಿ ಇಸ್ರೋ ಸೇರಿ ಹಲವಾರು ಯೋಜನೆಗಳಲ್ಲಿ ಪ್ರಾಜೆಕ್ಟ್ ಮ್ಯಾನೇಜರ್ ಮತ್ತು ಡೆಪ್ಯೂಟಿ ಪ್ರಾಜೆಕ್ಟ್ ಡೈರಕ್ಟರ್ ಆಗಿ ಸೇವೆಸಲ್ಲಿಸುತ್ತಾ ಹದಿನೈದಕ್ಕೂ ಹೆಚ್ಚಿನ ಯಶಸ್ವಿ ಯೋಜನೆಗಳಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಇವರ ಆಸಕ್ತಿ ಹಾಗೂ ಸಾಧನೆಗಳನ್ನು ಗುರುತಿಸಿದ ಇಸ್ರೋ ನಾಲ್ಕು ಪ್ರತಿಷ್ಠಿತ ಪುರಸ್ಕಾರಗಳನ್ನು ನೀಡಿದೆ ಅವುಗಳಲ್ಲಿ ಪ್ರಮುಖವಾದದ್ದು ಎಂದರೆ ಎಕ್ನೋನೊಮಿಕಲ್ ಸೊಸೈಟಿ ಆಫ್ ಇಂಡಿಯಾ ದ ಏ ಎಸ್ ಐ ಅವಾರ್ಡ್ ಕೂಡ ಒಂದು ಚಂದ್ರಯಾನ ಮೂರರ ಯೋಜನೆಯಲ್ಲಿ ಇವರ ವಿಭಾಗದ ಸಾಧನೆ ಅನನ್ಯ ಪ್ರಮುಖವಾಗಿ Lander Foot Pads, Lander Legs, Thruster Bracket, Rover Bogi Rod, Rover ಹೊರಬರಲು ಸಹಾಯ ಮಾಡುವ Ramp ಅನ್ನು ವಿನ್ಯಾಸ ಮತ್ತು ಅಭಿವೃದ್ಧಿ ಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುತ್ತಾರೆ ಆದಿತ್ಯ ಐ1 ನ ಬಿಡಿ ಭಾಗಗಳನ್ನು Post Bonding Work ಮತ್ತು LAM Engine Bracket ಗಳ ಜೋಡಣೆ ಮತ್ತು ವಿನ್ಯಾಸದಲ್ಲಿ ಪ್ರಮುಖ ಪಾತ್ರ ವಹಿಸಿರುತ್ತಾರೆ

ಮುದ್ರಕರು: ಗಿರೀಶ್ ಪ್ರಿಂಟರ್ಸ್, 163, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020 ಇ-ಮೇಲ್ : info@gireeshprinters.com website : www.gireeshprinters.com
ಸಂಪಾದಕರು: ರಾ.ಪ. ರವಿಶಂಕರ್ ಮತ್ತು ಪ್ರಕಾಶಕರು: ಎಸ್ ಕೆ. ಶೇಷಾಚಲ ವಾರ್ತಾಪತ್ರ ಸಮಿತಿಯ ಚೇರ್‌ಮನ್, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು-09 ಫೋನ್: 22206151/22206152